ಈ ಪಹಣಿಗಳನ್ನು ಬರೆದ ಕೂಡಲೆ ಅವುಗಳನ್ನು ನೇರವಾಗಿ ತಾಲ್ಲೂಕ್ ಶಿರಸ್ತೇದಾರರಲ್ಲಿ ಡಿಪಾಜಿಟ್ ಆಗುವಂತೆ ಕಳುಹಿಸಬೇಕೆಂದು ತಿಳಿಸಲಾಗಿದೆ ಹಾಗೊಂದುವೇಳೆ ಅದರಲ್ಲಿ ತಿದ್ದುಪಡಿಮಾಡಬೇಕೆಂದು ಕಂಡು ಬಂದಲ್ಲಿ ಅದನ್ನು ಶಿರಸ್ತೇದಾರರ ಅನುಮತಿ ಪಡೆದು ಮಾಡಬೇಕೆಂದೂ ಕೂಡ ತಿಳಿಸಲಾಗಿದೆ. ಹಾಗಲ್ಲದೆ ಯಾರಾದರೂ ಅದನ್ನ ಬದಲಾವಣೆ ಮಾಡಿದರೆ ಅವರು ಶಿಕ್ಷೆಗೊಳಗಾಗುತ್ತಾರೆ.

ಶ್ರೀ ಕೆ. ಎಚ್ ಪುಟ್ಟರಂಗನಾಥ್.—೨–೩ ವರ್ಷಗಳಾದರೂ ಪಹಣಿಗಳನ್ನು ಬರೆಯದೆ ಕೆಲವರು ದುಡ್ಡು ತೆಗೆದುಕೊಂಡು ಈಗ ಬರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ರೀತಿ ಪಹಣಿಗಳನ್ನು ಬರೆಯದೆ ಇದು ಈಗ ಬರೆಯುತ್ತಿರುವುದು ಕೆಲವು ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಬಂದು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸಲಹೆಯನ್ನು ಕೊಡಲಾಗಿದೆ.

ಶ್ರೀ ಕೆ. ಎಚ್. ಪುಟ್ಟರಂಗನಾಥ್.—ತಾಲ್ಲೂಕು ಆಫೀಸುಗಳಲ್ಲಿ ಕುಳಿತುಕೊಂಡು 5 ವರ್ಷಕ್ಕೊಮ್ಮೆ ಪಹಣಿ ಬರೆಯುವುದಕ್ಕಿಂತ ಪ್ರತಿ ವರ್ಷವೂ ಆ ಗ್ರಾಮ ಸ್ಥಳಗಳಿಗೆ ಹೋಗಿ ಪರಿಶೀಲನೆಮಾಡಿ ಪಹಣಿ ಬರೆಯುವುದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಸಲಹೆ ಪರಿಶೀಲಿಸತಕ್ಕದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಎನ್ನುವ ಸಂಖ್ಯೆ ನನ್ನ ಹತ್ತಿರ ಇಲ್ಲ.

ಡೆಪ್ಯುಟಿ ಕಮಿಷನರಗಳಿಗೆ ತಿಳಿಸಿ ಏನೇನು ಕಂಪ್ಲೈಂಟ್ಸ್ ಬಂದಿದೆ ಇದರ ಬಗ್ಗೆ. ಪಹಣಿ ಬದಲಾವಣೆ ಆಗುವ ವಿಷಯದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಖಡ್ಡಾಗಿ ಹೇಳಿರುವುದರ ಜೊತೆಗೆ ಸರ್‌ಕ್ಯೂಲರ್ ಇನ್‌ಸ್ಟ್ರಕ್ಷನ್ ಕೊಡಲಾಗಿದೆ.

POTENTIALITY OF ELECTRICITY IN THE STATE

234 Sri Kagodu Thimmappa (Sagar):—

Will the Minister for Public Works and Electricity be pleased to state:—

(*a*) the estimated potentiality of electricity that could be produced in the state ;

(*b*) whether the Government in addition to the power generating station existing at present have considered the feasibililty of producing electricity in any other areas ;

(*c*) the estimated amount required for the untilisation of entire potentiality of electricity available in the State ;

(*d*) whether they have sought any aid from Central Government in this behalf ?

Sri D. Devaraja Urs (Chief Minister) :—

(*a*) The hydro-potential in the State is estimated at 5,500 MW.

(*b*) Yes.

(*c*) A correct estimate is not possble as investgatjon are still under progress.

(*d*) Yes.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಇಲ್ಲಿ ಇರತಕ್ಕಂತ ವಿದ್ಯುತ್‌ಚ್ಛಕ್ತಿಗೆ ಉತ್ಪಾದನೆ ಕೇಂದ್ರಗಳಲ್ಲಿ ಅಲ್ಲದೆ ಬೇರೆ ಕ್ಷೇತ್ರಗಳನ್ನು ಸರ್ವೆ ಮಾಡಲಾಗಿದೆ ಎಂದು ಹೇಳಿದ್ದೀರಿ ಅವು ಯಾವಯಾವ ಕ್ಷೇತ್ರಗಳಲ್ಲಿ ಎಷ್ಟು ಮೇಗವಾಟ್ಸ್ ಉತ್ಪಾದನೆ ಮಾಡುವುದಕ್ಕೆ ಸಾಧ್ಯ ಎಂದು ಹೇಳುವುದಕ್ಕೆ ಆಗುತ್ತದೆಯೇ ?

†ಶ್ರೀ ಡಿ. ದೇವರಾಜ್ ಅರಸ್.—ಪರಿಶೀಲನೆ ಕರಾರುವಾಕ್ಕಾಗಿ ಮಾಡಿರತಕ್ಕದ್ದು ಶರಾವತಿ ಮೂರನೇ ಹಂತ 170, ಲಿಂಗಮನವಕ್ಕಿ ಪವರ್ ಹೌಸ್ 55, ಕಾಳಿನದಿ ಮೊದಲನೇ ವಿಭಾಗ ಫೇಸ್ 270, ಎರಡನೆಯದು 640, ವರಾಹಿ 240. ಬೆಡ್ತಿ 220 ಒಟ್ಟು 1623 ಮೆಗಾವಾಟ್ಸ್‌ಗಳು. ಇದಕ್ಕೆ ಮೊತ್ತ 292 ಕೋಟಿ ರೂಪಾಯಿಗಳು. ಇದು ಅಲ್ಲದೆ ಇನ್ನು ಗೇರುಸೊಪ್ಪ ಆಗನಾಷಿ, ಆಮೇಲೆ ಬರ್ಪಳಿ, ಅಲಿಮಟ್ಟಿಡ್ಯಾಮ್ ಪವರ್ ಹೌಸ್, ಒಡಕಲ್‌ಡ್ಯಾಮ್ ಪವರ್ ಹೌಸ್,ಕಬಿನಿಡ್ಯಾಮ್ ಪವರ್ ಹೌಸ್, ಹೀಗೆ ಇನ್ನು ಕೆಲವು ಇವೆ. ನಮಗೆ ಒಟ್ಟು ಹೈಡ್ರೋಎಲೆಕ್ಟ್ರಿಕ್ ಪವರ್ ಇಷ್ಟು ಸಿಗಬಹುದು ಎಂದು ಅಂದಾಜು ಮಾಡಿದ್ದೇವೆ. ಒಟ್ಟು ಇಡೀ ರಾಜ್ಯದಲ್ಲಿ 5,500 ಮೆಗವಾಟ್ಸ್ ಪೊಟೆನ್ಸಿಯಲ್ ಇದೆ ಎಂದು ಅಂದಾಜು ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟು ಪ್ರಮಾಣದ ಅಂದರೆ 5,500 ಮೆಗವಾಟ್ಸ್ ವಿದ್ಯುತ್‌ಚ್ಛಕ್ತಿಗೆ ಉತ್ಪಾದನೆ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದೀರಿ. ಉತ್ಪಾದನೆ ಮಾಡುವ ದೃಷ್ಟಿಯಿಂದ ಫೇಸ್ಡ್ ಪ್ರೋಗ್ರಾಮ್ ತಯಾರು ಮಾಡಿಕೊಂಡು ಆ ರೀತಿ ಕಾರ್ಯಗತ ಮಾಡುವುದಕ್ಕೆ ಏನಾದರೂ ಯೋಜನೆ ಸಿದ್ಧಪಡಿಸಿದೆಯೇ ? ಯಾವಾಗಿನಿಂದ ಪ್ರಾರಂಭ ಮಾಡುತ್ತೀರಿ ?

ಶ್ರೀ. ಡಿ. ದೇವರಾಜ್ ಅರಸ್.—ಹಿನೇ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟನ್ನು ಸೇರಿಸಬೇಕೆಂದು ಕೇಳಿದ್ದೇವೆ. ಶರಾವತಿ ಸ್ಟೇಜ್ ಮೂರು ಲಿಂಗಮನವಕ್ಕಿ ಡ್ಯಾಮ್ ಪವರ್‌ಹೌಸ್ ಕಾಳಿನದಿ ಫೇಸ್ ಒಂದು ಮತ್ತು ಎರಡು ವರಾಹಿ ಮತ್ತು ಬೆಡ್ತಿ. ಈ ಆರನ್ನು ಸೇರಿಸಿ ಎಂದು ಹೇಳಿದ್ದೇವೆ 6 ಸೇರಿಸಿದರೆ 1623 ಮೆಗವಾಟ್ಸ್ ವಿದ್ಯುತ್‌ಚ್ಛಕ್ತಿಗೆ ಉತ್ಪಾದನೆ 5ನೇ ಪಂಚವಾರ್ಷಿಕಯೋಜನೆಯೊಳಗೆ ಆಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅಂದಾಜಿನ ಪ್ರಕಾರ ಮೊದಲನೆ ವರ್ಷಕ್ಕೆ ಮೊತ್ತ 292 ಕೋಟಿ ರೂಪಾಯಿಗಳು ಎಂದು ಅಂದಾಜಾಗಿದೆ. ಇದನ್ನು ಪ್ಲಾನಿಂಗ್ ಕಮಿಷನ್ನಿಂದ ಶ್ರೀ ಕೆ ಎಲ್. ರಾವ್ ಅವರ ಹಿಂದು ಟೀಮ್ ಬಂದು ಡಿಸ್‌ಕಸ್ ಮಾಡಿ ಹೋಗಿದ್ದಾರೆ. ವರಾಹಿ ಮತ್ತು ಬೆಡ್ತಿ ಸೇರಿಸಬೇಕು ಎಂದು ಕೇಳಿದ್ದೇವೆ ಆಗಲಿ ಎಂದು ಒಪ್ಪಿದ್ದಾರೆ. ಒಂದು ಕಂಡೀಷನ್ ಹೇಳುತ್ತಾರೆ ಸಧ್ಯದಲ್ಲಿ ಇಷ್ಟನ್ನು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ ಕೆಲವು ಕಾಲ ಬೇರೆಯವರಿಗೆ ಕೊಡುವುದಕ್ಕೆ ಒಪ್ಪಿಕೊಂಡರೆ ಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಹೇಗೆ ಗೋವಾ ಮಹಾರಾಷ್ಟ್ರ ಮತ್ತು ಪಕ್ಕದಲ್ಲಿ ತಮಿಳುನಾಡು ಇವುಗಳಿಗೆ ಪವರ್ ಕೊಡುತ್ತಿದ್ದೇವೊ ಅದೇ ರೀತಿ ಫಿಕ್ಸೆಡ್ ಪೀರಿಯಡ್ ಕೊಡಲು ಒಪ್ಪಿಕೊಂಡರೆ ಸಹಾಯಕವಾಗುತ್ತದೆ. ಬೇರೆಕಡೆ ಪವರ್ ಪ್ಯಾರ್ಫೇಜ್ ಬರುತ್ತಿದೆ. ಆ ರೀತಿ ವಿದ್ಯುಚ್ಛಕ್ತಿ ಉತ್ಪಾದನೆ ಆದುದರಲ್ಲಿ ಕೆಲವು ಕಾಲ ಕೊಡುವುದಕ್ಕೆ ಒಪ್ಪಿಕೊಂಡರೆ ಮಾಡೋಣ ಎಂದು ಹೇಗದ್ದಾರೆ ಅದರ ಪರಿಶೀಲನೆ ನಡೆಯುತ್ತಿದೆ.

ಶ್ರೀ ಎಂ ಎಸ್ ಕೃಷ್ಣನ್.—ತಾಪು (ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ ಕೇಂದ್ರ ಸರ್ಕಾರದಿಂದ ಹಣ ಸಹಾಯ ಕೇಳಿದ್ದೇವೆ ಎಂದು ಹೇಳಿದ್ದೀರಿ. ೨೯೪ ಕೋಟಿ ರೂಪಾಯಿ ಕೇಳಿದ್ದೇವೆ. ಇದಕ್ಕಿಂತ ಜಾಸ್ತಿ ಅಥವಾ ಪೂರ್ತಿ ಹಣ ಅವರಿಂದ ಪಡೆಯುತ್ತೀರಾ ಅಥವಾ ಮೈಸೂರು ಸರ್ಕಾರದಿಂದ ಕೂಡ ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತೀರಾ ಇದರ ಮಟ್ಟಿಗೆ ವಿವರಣೆ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಮೈಸೂರು ಸರ್ಕಾರದವರು ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಕೇಂದ್ರಸರ್ಕಾರದವರೂ ಹೊರಬೇಕಾಗುತ್ತದೆ, ಸಾಲ ತೆಗೆದುಕೊಳ್ಳಬೇಕಾಗುತ್ತದೆ 294 ಕೋಟಿ ನಮ್ಮಲ್ಲಿ ಕೊಡುವುದಕ್ಕೆ ಆಗುತ್ತದೆಯೇ ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಎಂ ಎಸ್. ಕೃಷ್ಣನ್.—ಕೇಂದ್ರದಿಂದ ಎಷ್ಟು ಕೇಳಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.—ಕೇಂದ್ರದಿಂದ ಕಾಳಿನದಿ ಪ್ರಾಜೆಕ್ಟ್ ನೀವೇ ಮಾಡಿಸಿ ಎಂದು ಕೇಳುತ್ತಿದ್ದೇವೆ, ನಾವು ೧೦ ಕೋಟಿ ಖರ್ಚು ಮಾಡಿದ್ದೇವೆ. ನಮ್ಮ ಪ್ಲಾನಿನಿಂದ ದುಡ್ಡು ಖರ್ಚು ಮಾಡಿದರೆ ಪ್ಲಾನ್ ಪ್ರಾಜೆಕ್ಟ್‌ಗೆ ತೊಂದರೆಯಾಗುತ್ತದೆ. ಯಾವುದಾದರು ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಆ ಸಾಲ ಮಾಸಸಾತಿ ಆಗುವಂತಹದು ಎಂದು ಬ್ಯಾಂಕಿನವರಿಗೆ ಖಾತರಿ ಆದರೆ ಅವರು ಸಾಲ ಕೊಡುವುದಕ್ಕೆ ಒಪ್ಪುತ್ತಾರೆ. ಅದು ಟ್ಯಾಂಕ್‌ಬಲ್ ಪ್ರೊಪೋಸಿಷನ್ ಎಂದು ಹೇಳುತ್ತಾರೆ. ಕಾಳೀ ನದಿ ಪ್ರಾಜೆಕ್ಟ್‌ಗೆ ೨೫೦ ಕೋಟಿ ರೂಪಾಯಿಕೊಟ್ಟರೆ ನಿಗದಿಯಾದ ವರ್ಷಗಳಲ್ಲಿ ಅದರ ಬಡ್ಡಿ

ಮತ್ತು ಸಾಲಕ್ಕೆ ಕೊಟ್ಟಿಂತಹ ಅಸಲು ಎರಡೂ ಕೊಡುವುದಕ್ಕೆ ಸಾಧ್ಯ ಎಂದು ತೋರಿಸಬೇಕು ಬ್ಯಾಂಕಿನವರು ಕೊಡುವುದಕ್ಕೆ ತಯಾರಿದ್ದಾರೆ. ಆದರೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಬ್ಯಾಂಕಂ ಕೊಡಬೇಕಾಗುತ್ತದೆ. ಈಗ ನಮ್ಮ ಹತ್ತಿರ ಅಷ್ಟು ದುಡ್ಡು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಎಲಾ ರಿಸೋರ್ಸ್ ಒಂದಾಗಿ ಹಾಕುವುದು ಸಾಧ್ಯವಾಗದೆ ಇರುವುರಿಂದ ಎಷ್ಟು ವರ್ಷ ಗಳಲ್ಲಿ ತೀರಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುದಿಲ್ಲ. ಬೇರೆ ಬ್ಯಾಂಕುಗಳಿಂದ ಸಾಲ ತೆಗೆದು ಕೊಳ್ಳುತ್ತೇವೆ ಅಪ್ಪಣೆ ಕೊಡಿ, ಇಲ್ಲ ನೀವೇ ದುಡ್ಡು ಕೊಡಿ ಎರಡರಲ್ಲಿ ಒಂದು ಮಾಡಬೇಕು ಎಂದು ಹೇಳಿದಂತೆ ಕೇಂದ್ರ ಸರ್ಕಾದವರು ಪರೀಶೀಲನೆಗೆ ಇಟ್ಟುಕೊಂಡಿದ್ದಾರೆ. ಈ ವರ್ಷಕ್ಕೆ ಬೇಕಾದ ದುಡ್ಡನ್ನು ಒದಗಿಸಿಕೊಟ್ಟಿದ್ದಾರೆ. ನಮ್ಮ ಹತ್ತಿರ ದುಡ್ಡು ಇರಲಿಲ್ಲ. ಸ್ವಲ್ಪ ಭಾಗ ಖರ್ಚು ಮಾಡಿದ್ದೇವೆ. ಕೇಂದ್ರದವರು ೧೯೭೨-೭೩ನೇ ಸಾಲಿಗೆ ೧೩-೧೪ ಕೋಟಿ ಒದಗಿಸುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಈ ರೀತಿ ಕೆಲಸ ನಡೆಯುತ್ತಿದೆ. ಮುಂದೆ ಕೂಡ ಇನ್ನು ಏನು ಮಾಡಬೇಕು, ಯಾವರೀತಿ ಮಾಡಬೇಕು ಎಂದು ತೀರ್ಮಾನ ತೆಗೆದುಕೊಳ್ಳುತ್ತಾ ಇದ್ದಾರೆ ಕೇಂದ್ರದಿಂದ ಹಣ ಸಹಾಯ ಆಗಬೇಕೆ, ಅಥವಾ ಬ್ಯಾಂಕಿನಿಂದ ಆಗಬೇಕೆ ಎಂಬುದು ಇದೆ. ಯಾವುದಾದರೂ ಒಂದು ರೀತಿಯಿಂದ ಕೊಡುತ್ತಾರೆ ಎಂದು ನನ್ನ ಭಾವನೆ.

ಶ್ರೀ ಬಿ. ಬೈರಪ್ಪಾಜಿ.—ಈ ವರಾಹಿ ನದಿಯ ನೀರು ವ್ಯವಸಾಯಕ್ಕೆ ಕೊಡುವುದಕ್ಕೆ ಸಾಧ್ಯವೇ ? ಮತ್ತು ಇಬರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ? ವರಾಹಿ ನದಿಯಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದನ್ನು ನಿಲ್ಲಿಸಿ ವ್ಯವಸಾಯಕ್ಕೆ ಕೊಡತಕ್ಕ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್-—ಹೊಸ ವಿಚಾರ ಹೇಳಿದ್ದಾರೆ, ಪರಿಶೀಲನೆ ಮಾಡೋಣ.

PRIVATE PRIMARY SCHOOLS IN BELGAUM CITY RANGE

249. SRI B. B. SAYANAK (Belgaum).—

Will the Minister for Education be pleased to state :—

(*a*) the number of Private Primary Schools in Belgaum City Range ;

(*b*) whether the Government is aware that some of the Private School Owners are collecting Rs. 15 to Rs. 30 from the teachers as rent of the school building :

(*c*) whether it is a fact that the teachers had brought this to the notice of the Deputy Director of Public Instruction, Belgaum ;

(*d*) if so, the action taken by the Deputy Director of Public Instruction, Belgaum ?

SRI A. R. BADARINARAYAN (MINISTER FOR EDUCATION).—

(*a*) Six

(*b*) No

(*c*) No

(*d*) Does not arise in view of replies to clauses (*b*) and (*c*) above.